ಎಮ್.ವಿ.ಸಿ. ನಂ.144/2023

ಪಿ.ಡಬ್ಲ್ಯೂ1

ದಿನಾಂಕಃ 03-09-2024.

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರವಾಗಿ ವಕೀಲರಿಂದಃ**

ನಾನು ಅಪಘತಾವನ್ನು ಕಣ್ಣಾರೆ ನೋಡಿರುವುದಿಲ್ಲ. ಸದರಿ ಅಪಘಾತದ ಬಗ್ಗೆ ಮಾಹಿತಿಯನ್ನು ನಮ್ಮ ವಕೀಲರಿಗೆ ನಾನು ಇನ್ನೊಬ್ಬರ ಕಡೆಯಿಂದ ಕೇಳಿ ತಿಳಿದುಕೊಂಡು ನೀಡಿರುತ್ತೇನೆ. ಸದರಿ ಅಪಘಾತದ ಕಾಲಕ್ಕೆ ಮೋಟಾರ ಸೈಕಲ ಚಲಾಯಿಸುತ್ತಿದ್ದ ಮೆಹಬೂಬ ಇತನ ಪರಿಚಯ ಇರುತ್ತದೆ. ಅವರು ನಮ್ಮ ಊರಿನ ವ್ಯಕ್ತಿಯಾಗಿದ್ದ ನಮ್ಮ ಸಮುದಾಯವಾಗಿರುತ್ತಾರೆ. ಸದರಿ ಮೆಹಬೂಬ ಇತನ ಜೊತೆ ನನ್ನ ಮಗನ ಒಡನಾಟ ಇದಿತ್ತು ಎಂದರೆ ಸರಿ. ಸದರಿ ಅಪಘಾತವು ಮೋಟಾರ ಸೈಕಲ ಸವಾರನ ತಪ್ಪಿನಿಂದ ಅಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತವು ಸೈಕಲ ಸವಾರನ ತಪ್ಪಿನಿಂದ ಆಗಿದ್ದರೂ ಸಹ ನಾನು ಉದ್ದೇಶ ಪೂರ್ವಕವಾಗಿ ಟಿಪ್ಪರ ಲಾರಿ ಚಾಲಕನ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಟಿಪ್ಪರ ಲಾರಿ ಶಹಾಪೂರ ಕಡೆಯಿಂದ ಯಾದಗಿರಿ ಕಡೆಗೆ ಹೋಗುತ್ತಿತ್ತು. ಆ ದಿನ ನನ್ನ ಮಗ ಮತ್ತು ಮೋಟಾರ ಸೈಕಲ ಸವಾರ ಯಾದಗಿರಿ ಕಡೆಯಿಂದ ನೈಕಲ ಕಡೆಗೆ ಬರುತ್ತಿದ್ದರು ಎಂದರೆ ಸರಿ. ನೈಕಲ ಗ್ರಾಮವು ಶಹಾಪೂರ - ಯಾದಗಿರಿ ರಸ್ತೆಗೆ ಹೊಂದಿಕೊಂಡಂತೆ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ರಸ್ತೆ ದ್ವಿಪಥ ರಸ್ತೆಯಾಗಿರುತ್ತದೆ ಎಂದರೆ ಸರಿ. ಅಪಘಾತ ಕಾಲಕ್ಕೆ ಟಿಪ್ಪರ ಲಾರಿ ರಸ್ತೆಯ ಎಡಭಾಗದಲ್ಲಿ ಹೊಗುತ್ತಿತ್ತು ಎಂದರೆ ಸಾಕ್ಷಿ ಅದು ಎಡಭಾಗದಿಂದ ಬಲಭಾಗಕ್ಕೆ ಬಂದು ಮೋಟಾರ ಸೈಕಲ ಡಿಕ್ಕಿ ಹೊಡೆದಿರುತ್ತದೆ ಎಂದು ಹೇಳುತ್ತಾರೆ. ಸದರಿ ಅಪಘಾತವು ಟಿಪ್ಪರ ಲಾರಿ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂ ದರೆ ಸರಿ. ಸದರಿ ಟಿಪಿಪ್ಪರ ಲಾರಿ ರಸ್ತೆಯ ಬಲಭಾಗಕ್ಕೆ ಬಂದು ಮೋಟಾರ ಸೈಕಲ ಗೆ ಡಿಕ್ಕಿ ಹೊಡೆದು ಅಪಘಾತಪಡಿರುತ್ತದೆ ಎಂದು ಹೇಳಿ ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮೋಟಾರ ಸೈಕಲ ಸವಾರ ರಸತೆಯ ಬಲಬದಿಗೆ ಚಲಾಯಿಸಿಕಕೂಂಡು ಹೋಗಿ ಟಿಪ್ಪರ ಲಾರಿಗೆ ಡಿಕ್ಕಿ ಹೊಡೆದಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘತಾವು ಮೋಟಾರ ಸೈಕಲ ಸವಾರನ ತಪ್ಪಿನಿಂದ ಆಗಿದ್ದರೂ ಸಹ ಪೊಲೀಸರೊಂದಿಗೆ ಶಾಮಿಲಾಗಿ ಟಿಪ್ಪರ ಲಾರಿ ಚಾಲಕನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

2. ಸದರಿ ಅಪಘಾತ ರಾತ್ರಿ 8.30 ಗಂಟೆಗೆ ಆಗಿತ್ತು, ನಂತರ ನಾವು ಸ್ತಳಕ್ಕೆ ಹೋಗಿ ಗಾಯಾಳುಗಳನ್ನು ಸರ್ಕಾರಿ ಆಸ್ಪತ್ರೆಗೆ ಯಾದಗಿರಿಗೆ ತೆಗೆದುಕೊಂಡು ಹೋಗಿರುತ್ತೇವೆ. ಆ ಕಾಲಕ್ಕೆ ನಾನು, ನನ್ನ ಹೆಂಡತಿ ಹಾಗೂ ನನ್ನ 4 ಜನ ಅಣ್ಣ ತಮ್ಮಂದಿರು ಜನರ ಸೇರಿ ಹೋಗಿದ್ದೇವು. ನಾವು ಆಸ್ಪತ್ರೆ ಗೆ ಹೋಗಿದ್ದಾಗ ಸಮಯ ಅಂದಾಜು ರಾತ್ರಿ 11.00 ಗಂಟೆ ಆಗಿತ್ತು. ಸದರಿ ಅಪಘಾತದ ಬಗ್ಗೆ ಮಾಹಿತಿಯನ್ನು ವೈದ್ಯರಿಗೆ ಕೊಟ್ಟಿರುತ್ತೇನೆ. ಅಲ್ಲಿ ವೈದ್ಯರು ನನ್ನ ಸಹಿ ಪಡೆದುಕೊಂಡಿರುತಾರೆ. ಸದರಿ ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದು ಹೇಳಿ ವೈದ್ಯರ ಮುಂದೆ ಹೇಳಿಕೆ ನೀಡಿರುವುದಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತವು ಮೋಟಾರ ಸೈಕಲ ಸವಾರನ ತಪ್ಪಿನಿಂದ ಆಗಿದ್ದ ಕಾರಣ ನಾವು ವೈದ್ಯರ ಮುಂದೆ ಅಪಘಾತದ ಬಗ್ಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಮೂರು ಜನ ಗಂಡು ಮಕ್ಕಳು ಹಾಗೂ 4 ಜನ ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ಮೂರು ಜನ ಗಂಡು ಮಕ್ಕಳ ಪೈಕಿ ಒಬ್ಬ ಬಡಿಗೇತನ ಕೆಲಸ ಹಾಗೂ ಇನ್ನೊಬ್ಬ ಕೂಲಿ ಕೆಲಸ ಮಾಡುತ್ತಾನೆ. ನಾನು ಹೊಲ ಮನೆ ಕೆಲಸ ಮಾಡುತ್ತೇನೆ. ಸದರಿ ಅಪಘಾತದಲ್ಲಿ ನನ್ನ ಮಗ ಮರಣ ಹೊಂದಿರುವ ಕಾರಣ ನನಗೆ ಯಾವುದೇ ಆರ್ಥಿಕ ನಷ್ಟವಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಉಳಿದ ಎರಡು ಜನ ಗಂಡು ಮಕ್ಕಳು ಸಹ ನನಗೆ ಆರ್ಥಿಕವಾಗಿ ಸಹಾಯ ಮಾಡುತ್ತಾರೆ. ನಾನು ಈ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಃ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾದಂ. ಶಹಾಪೂರ.